(Sri C. J. Muckannappa)

it to your notice. ಆದ್ದರಿಂದ ಈಗ ಆ ಪುಸ್ತಕದಲ್ಲಿರತಕ್ಕ ಕೆಲವು ವ್ಯಾರಾಗಳನ್ನು ಈ ನಥೆಯ ಗಮನಕ್ಕೆ ತರುವುದಕ್ಕೆ ತಾವು ನನಗೆ ಅಪ್ಪಣೆಯನ್ನು ಕೊಡಬೇಕು.

Mr. SPEAKER.—Not now.

Sri C. J. MUCKANNAPPA.—Tomorrow ?

Mr. SPEAKER.—We shall see.

PAPERS LAID ON THE TABLE.

Sri R. M. PATIL (Minister for Home).—Sir, I beg to lay on the Table of the House :

1. Notification No. HD 150 TMT 62 dated 6th November 1963 (Reduction of Tax payable) ;
2. Notification No. HD 150 TMT 62 dated 7th November 1963 (Amendments to the Notification No. HD 39 TMT 62, dated 19th October 1962) ;

as required under sub-seetion (2) of section 16 of the Mysore Motor Vehicles Taxation Act, 1957.

MYSORE MOTOR VEHICLES (TAXATION ON PASSENGERS AND GOODS) (AMENDMENT) BILL, 1962.

Motion to consider.

Sri R. M. PATIL (Minister for Home).—Sir, I beg to move :

"That the Mysore Motor Vehicles (Taxation on Passengers and Goods) (Amendment) Bill, 1962, be taken into consideration."

Mr. SPEAKER.—Motion moved :

"That the Mysore Motor Vehicles (Taxation on Passengers and Goods) (Amendment) Bill, 1962, be taken into consideration."

† Sri R. M. PATIL.—Sir, this is an amendment proposed in order to augment the resources of the State in order to meet the expenditure to be incurred in the Third Five Year Plan. The Statement of Objects and Reasons under this Heading has been mentioned : 'due to the tempo of the Third Five Year Plan additional resources have to be found for meeting the increased expenditure that has been incurred to fulfil the financial and physical targets fixed in the Plan. Therefore it is proposed to increase the rate of taxation under the Motor Vehicles Tax on passengers and goods Act keeping in view the rates prevailing in the neighbouring States. Hence the Bill.

While addressing this, I wish to bring to the kind notice of this August House, the existing rates. Rs. 22.50 is a composition rate for the month. Whereas in Madras it is Rs. 37.50, Andhra Pradesh it is Rs. 45.00 prior to 1st April 1963. Kerala it is Rs. 37.50, Maharashtra lumpsum payment. There are different rates fixed for lumpsum payment. I shall submit the statement accordingly.

The rates are:

Not exceeding two metric tons 20 rupees per month exceeding two metric tons and not exceeding three metric tons 30 rupees; exceeding 3 but not exeeding 4, 40 rupees; similarly it goes on upto and ultimately exeeding eight metric tons 70 rupees. The anticipated additional revenue would be 15 lakhs.

This is the main object, Sir. Amendment to clause 3 instead of 3 nP, it is raised to 5 nP. Then a clause is added. This is in respect of assessing the exact mileage that he travels. The State Government may by rules provide that in such circumstances, and subject to such conditions as may be specified in such rules, a drawback, set-off or refund of the whole or any part of the tax on goods levied and collected under this Act, be granted to an operator by the prescribed authority, regard being had to the nature of goods carried, the destination to which, and the purpose for which, the goods are carried, and such other factors as may be prescribed.

The Tax Officer shall refund to an operator, in such manner as may be prescribed, the amount of tax and penalty if any, paid by such operator in excess of the amount due from him. The refund may be either by cash payment, or at the option of the operator, by duduction of such excess from the amount of tax and penalty, if any, due in respect of any other period: So, adjustment is also there. There is also a proviso which says: Provided that, the Tax Officer shall first apply such excess towards the recovery of any amount due in respect of which a notice under section 9 has been served on the operator, and shall then refund the balance, if any. There is also a small amendment in the schedule. In clause (b) of paragraph 1 of the Schedule to the principal Act, for the words "twenty-two rupees and fifty naye paise", the words "thirty-seven rupees and fifty naye paise" shall be substituted. This is all, Sir.

Sri S. SIVAPPA.—Is this increase from 22.50 to 37.50 per month for lorries or also for the buses carrying passengers?

Sri R. M. PATIL.—This is for lorries—public carriers.

† Sri G. V. GOWDA (Paliya).—Mr. Speaker, Sir, this bill envisages an increase of tax on goods from three nP. in a rupee to five nP. If it were to be a composition it is from Rs. 22.50 to Rs. 37.50 nP. a month that is, an increase of 15 rupees or 66 2/3 per cent. The Hon'ble Minister just now mentioned two grounds for this increase. The first reason is that the rates prevailing in the neighbouring States are very much higher than our rates and secondly to find additional resource for fulfilling the plan scheme—physical and financial targets fixed under the plan. So

(SRI G. V. GOWDA)

far as physical target is concerned, even the M.Ps. in the Parliament recently had their own say in the matter and it is shown to the country in what manner these plan schemes have been implemented to fulfil the physical targets. Sir, we know that additional resources are necessary. But, by imposing a tax we should also see that impact it does on the common man in the land. The tax may be directly levied on the owner of the lorry; but this will ultimately fall on the consumer because naturally the owner will raise the transport charges. If the Government seeks to raise the rate by two nP. in turn, the owner may raise it by ten nP. The Minister should study this position. This tax is not like the surcharge on the land revenue. The Government cannot prevent the lorry owners from increasing anything. This is what happened in the case of cinemas when the entertainment tax was increased; the rates of tickets were increased and to that extent the excess burden fell on the people who go to cinemas. Sir, we are all aware that the prices are on the increase and if this additional tax burden is put, the prices will still go up and the common man will be affected by that. Therefore, I suggest that this increase of 66 2/3 per cent at one stroke is not justifiable even on the grounds mentioned by the Hon'ble Minister. Sir, I wish to know from the Minister how much is being realised by the Mysore Motor Vehicle Tax on Passenger and Goods Act, 1961. As matters stand, they would be realising about 22 lakhs. So, from this proposed increase on goods only, the Minister said that he would be realising 15 lakhs. I do not agree with him; it would not be correct.

† SRI R. M. PATIL.—Sir, I will give the statistics. In the year 1961—62 from T.P.G. the tax collected is 64 lakhs 8,000 and odd; for the year 1992—63 it is one crore 34 lakhs 20,000 and odd. Up to end of September, it is 65 lakhs, 91,000 and odd.

SRI G. V. GOWDA.—Is there any break-up for tax on goods, Sir?

SRI R. M. PATIL.—That is not available just now.

SRI G. V. GOWDA.—Sir, so far as tax on passengers are concerned, in fact, all the operators have chosen to compound this lay every quarter or every month. The lorry owners also have chosen to pay the composition fee also. So, all choose to take advantage of this composition clause. So far as passengers are concerned, since the operators have chosen to pay only the composition fee, there is no question of increasing the rate because the Government have fixed that they should not levy more five nP. But, in the case of public carrier operations, there is no such restriction. How is the Government sure that the owners will not increase the rate more than two nP. in a rupee and put the burden on the consumer and take advantage of this? There is no limitation fixed in this respect. The net result will be, the common man will be made to pay all this. When we want to see that the economic standard of the poor and the middle-class people has to be raised, by the imposition of this tax, it is impossible to take them up to the level that we desire. Therefore, there is no justification for this increase in tax.

2-30 P.M.

Sir, here exemption is sought to be given to vehicles owned by the Central Government and the Railways. So far as State Government is concerned, naturally they carry exemption; even if there is no exemption, it is only a book adjustment. Sir, clause 14A is also likely to be mis-used. It is not satisfactorily worded nor could it be implemented successfully. I submit, that Government should have chosen some other method for augmenting the resources instead of this levy which directly affects the consumers and also the food prices. I submit that the Hon'ble Minister may be pleased to withdraw this Bill. Sir, the Finance Minister during the budget session and the Chief Minister have said there would be no fresh taxation during the next year. This measure may be given effect to from 1st April 1964. Such being the case, this also goes against the promise given by the Chief Minister very recently. For augmenting the resources of the State for the plan schemes, it could be done by realising the arrears of sales-tax and collecting the forest revenue and other such arrears. Even though the Finance Minister says that the collection in respect of sales-tax is 94 to 98 per cent, we have got our own doubts. It was promised that 29 crores would be realised by the additional taxation. I would like to know from the Government as to how much money was realised by additional taxation that was imposed in 1961—62 and 1962—63. It was said that by implementing the recommendations of the A. G. R. Committee, Government would be able to save five crores, and would be able to realise two crores more from forest. In respect of sales-tax, they said they would realise two to three crores as a result of the increased rates. In this way, they hoped to realise 42 crores for the fulfilment of the plan schemes. Why that obligation is not going to be fulfilled and why they are notable to realise what they wanted to by the imposition of these ad ditional taxation, I want to know. All these factors justify my assertion that the Government should not have come forward with this bill. The Finance Minister after his return from Delhi admitted that he would not be able to raise 42 crores.

In this connection, I must say that this Government should have made attempts to secure greater quantum of financial aid from the Centre. We understand the Finance Commission is going to be constituted shortly and we should prepare *prima facie* case. We deserve more financial assistance keeping in view the help we received in the second plan. In regard to the whole country, the plan expenditure in the third plan has gone up by 2 to 2½ times over the second plan but the percentage of central assistance given to us has not proportionately risen. There is no reason why Government should not be blamed because the deficit is sought to be collected from the people as tax. If the Government had been vigilant, it would have been possible to get more money by other sources and thus save the people from avoiding taxation. The Government should rise to the occasion. This measure, however, does not deserve our support since it would have a serious impact on the consumers of the State.

† ಶ್ರೀ ಸಿದ್ದಯ್ಯ ಕಾಶಿಮಠ (ಶಿರಹಟ್ಟಿ).—ಅಧ್ಯಕ್ಷರೆ, ಹೋಂಮಿನಿಸ್ಟರ್‌ರವರು ಮೈಸೂರು ಮೋಟಾರ್ ವೆಹಿಕಲ್ಸ್ (ಟ್ಯಾಕ್ಸೇಶನ್ ಆನ್ ಪ್ಯಾಸೆಂಜರ್ಸ್ ಅಂಡ್ ಗೂಡ್ಸ್) ಅಮೆಂಡ್‌ಮೆಂಟ್ ಬಿಲ್ಲನ್ನು ಈ ಸಭೆಯ ಮುಂದಿಡುವಾಗ ಅದನ್ನು ತರಲು ಕಾರಣವೇನು ಕೊಟ್ಟಿದ್ದಾರೆಂದರೆ: ಮೂರನೆ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಹೆಚ್ಚು ಹಣ ಬೇಕಾಗಿದೆ, ಆ ಯೋಜನೆಯ ಪೆಚ್ಚವನ್ನು ನಿರ್ವಹಿಸುವುದಕ್ಕೆ ಈ ತೆರಿಗೆ ಹಾಕುತ್ತಿದೆಯೆಂದು, ಇದರಂತೆ ಪಬ್ಲಿಕ್ ಕ್ಯಾರಿಯರ್ ವೆಹಿಕಲ್ಲುಗಳ ಮೇಲಿನ ತೆರಿಗೆ ಮೂರು ನಯಪೈಸೆಯಿಂದ, 5 ನಯಪೈಸೆಗೆ ಜಾಸ್ತಿಯಾಗುತ್ತದೆ, ಕಾಂಪೋಸಿಷನ್ ಫೀ ರೂ. 22.50 ಇದ್ದದ್ದು ರೂ. 37-50ಕ್ಕೆ ಜಾಸ್ತಿಯಾಗುತ್ತದೆ. ಈ ಜಾಸ್ತಿ ಟ್ಯಾಕ್ಸನ್ನು ಹಾಕುವುದರ ಮೂಲಕ ಸ್ಟೇಟ್ ಕ್ಯಾರೇಜ್ ವೆಹಿಕಲ್ಲುಗಳಿಗೆ ಏನು ಜಾಸ್ತಿ ನವಲತ್ತುಗಳನ್ನು ಒದಗಿಸಿಕೊಟ್ಟಿದ್ದಾರೆಂದು ಪ್ರಶ್ನಿಸಬೇಕಾಗಿದೆ. ಈ ಸಂದರ್ಭಗಳಲ್ಲಿ ಈ ವೆಹಿಕಲ್ಲುಗಳ ಮಾಲೀಕರಿಗೆ ಇರುವ ತೊಂದರೆಗಳೇನು ಎಂಬುದನ್ನು ನೋಡಬೇಕು. ಈ ವೆಹಿಕಲ್ಲುಗಳ ಟೈರು ಮುಂತಾದ ಸ್ಪೇರು ಪಾರ್ಟುಗಳ ಬೆಲೆ ಹೆಚ್ಚಿದೆ. ಪಬ್ಲಿಕ್ ಕ್ಯಾರಿಯರ್ ವೆಹಿಕಲ್ಲುಗಳ ಮೇಲೆ ತೆರಿಗೆ ಹೆಚ್ಚಾದರೆ ಅದು ಸಾಮಾನ್ಯ ಜನರ ಮೇಲೆಯೇ ಬೀಳುತ್ತದೆ. ಒಂದು ಮೈಲಿಗೆ ಇಷ್ಟು ಎಂದು ತೆಗೆದುಕೊಳ್ಳುತ್ತಾರೆ, ಅದನ್ನು ನಿರ್ದಿಷ್ಟ ಮಾಡಿದರೆ ಈ ದರ ಜಾಸ್ತಿಯಾದರೂ ಸಾಮಾನ್ಯ ಜನಕ್ಕೆ ಕಟ್ಟುವುದಕ್ಕೆ ಆಗುವುದಿಲ್ಲ. ಇಲ್ಲದಿದ್ದರೆ ಈ ತೆರಿಗೆಯ ಭಾರವನ್ನು ಅವರೇ ಹೊರಬೇಕು. ಈಗ ಟೈರ್ ಹಚ್ಚತಕ್ಕಂಥ ಪದ್ಧತಿಯೂ ನರಿಯಾಗಿಲ್ಲ. ಅದರ ರೇಟು 200 ರೂಪಾಯಿ ಇದ್ದರೆ 600 ರೂಪಾಯಿ ಕೊಡುವ ಪರಿಸ್ಥಿತಿ ಇದೆ. ಪ್ರೈವೇಟ್ ಜನರುಗಳಿಗೆ ಇದರ ಏಜನ್ಸಿ ಕೊಟ್ಟಿರುವುದರಿಂದ ಈ ರೀತಿ ಖರೀದಿ ಏರಿಸುತ್ತಾರೆ. ಈ ವಾಹನಗಳಿಗೆ ಬೇಕಾಗಿರತಕ್ಕಂಥ ಸಾಮಗ್ರಿಗಳನ್ನೆಲ್ಲಾ ಸಹಕಾರ ಸಂಸ್ಥೆಗಳ ಮೂಲಕ ದೊರಕಿಸುವಂತೆ ಮಾಡಿದರೆ, ಸ್ಪೇರ್ ಪಾರ್ಟುಗಳಿಗಿರುವ ಹೆಚ್ಚು ಧಾರಣೆಯನ್ನು ಕಡಮೆ ಮಾಡಬಹುದು.

ಟ್ಯಾಕ್ಸ್ ಇನ್ನೊಂದು ಏನೆಂದರೆ ಈ ಟ್ಯಾಕ್ಸು ಕಾಂಪೌಂಡ್ ಮಾಡಿಕೊಳ್ಳುವಾಗ, ರೋಡ್ ಸೆಸ್ ತುಂಬುವುದಕ್ಕೆ 15 ದಿವಸಗಳಿಗೆ ಮುಂಚಿತವಾಗಿ ಅರ್ಜಿ ಹಾಕಿಕೊಳ್ಳಬೇಕು ಕಾಂಪೌಂಡ್ ಮಾಡಿಕೊಳ್ಳುವವರೂ ಎರಡು ಎರಡು ಪುಸ್ತುಕಗಳನ್ನು ಇಟ್ಟಿರಬೇಕಾಗುತ್ತದೆ. ಮೂರು ತಿಂಗಳಿಗೆ ಒಂದು ಸಾರಿ ಈ ತೆರಿಗೆಯನ್ನು ಕೊಟ್ಟು ಒಂದೇ ಅಕೌಂಟ್ ಪುಸ್ತುಕವನ್ನು ಮಾಡಿದರೆ ಅನುಕೂಲವಾಗುತ್ತದೆ. ಈ ತೆರನಾಗಿ ತಿಳಿಸಿರುವುದರಿಂದ ಅನೇಕನಲ ಜನರುಗಳಿಗೆ ತೊಂದರೆಯಾಗುವ ಪರಿಸ್ಥಿತಿ ಇದೆ. ಅದನ್ನು ಕಡಿಮೆ ಮಾಡಬೇಕು.

ಈ ಟ್ಯಕ್ಕು ಜನರುಗಳಿಗೆ ಮುಂತಾದವರಿಗೆ ಒಂದು ಫೈನಾನ್ಸಿಯಲ್ ಕಾರ್ಪೊರೇಷನ್ ಮುಖಾಂತರವಾಗಿ ಸಾಲ ಒದಗಿನುತ್ತಾ ಇದ್ದಾರೆ. ಈ ಕಾರ್ಪೊರೇಶನ್ನಿನವರು 9 ರೂಪಾಯಿ ಬಡ್ಡಿ ಸಾಲ ಹಾಕಿದರೂ, ಅದನ್ನು ನರಿಯಾಗಿ ಕ್ಯಾಲುಕುಲೇಟ್ ಮಾಡಿದರೆ, ಅದು ಶೇಕಡ 18-20 ರೂಪಾಯಿಗೆ ಬರುತ್ತದೆ. ಇಂಥ ಪರಿಸ್ಥಿತಿ ಇದೆ. ಆದ್ದರಿಂದ ಈ ಜನರುಗಳಿಗೆ ಇನ್ನೂ ಕೆಲವೊಂದು ನವಲತ್ತುಗಳನ್ನು ಒದಗಿಸಬೇಕು. ಈ ಮೈಲೇಜ್ ಫಿಕ್ಸ್ ಮಾಡದಿದ್ದರೆ ಈ ತೆರಿಗೆ ಜನರಮೇಲೆ ಬೀಳುತ್ತದೆ. ಆದನ್ನು ಫಿಕ್ಸ್ ಮಾಡಬೇಕೆಂದು ಮತ್ತೊಮ್ಮೆ ಹೇಳುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ್).—ಸ್ವಾಮಿ, ಈ Mysore Motor Vehicles (Taxation on passengers and goods) ಬಿಲ್ಲನ್ನು ನಾನಾದರೂ ಒಪ್ಪಲು ಮತ್ತು ಅದಕ್ಕೆ ಬೆಂಬಲ ಕೊಡಲು ಅದಕ್ಕೆ ಸಾಧ್ಯವಿಲ್ಲ. ಬಸ್ಸುಗಳು, ಲಾರಿಗಳು, ಮತ್ತಿತರ ಮೋಟಾರು ವೆಹಿಕಲ್ಲುಗಳ ಮೇಲೆ ಹಾಕುತ್ತಿರುವ ತೆರಿಗೆ ನೋಡಿದರೆ ಜನಗಳು ಓಡಾಡುವುದಕ್ಕೆ ಮತ್ತು ಸಾಮಾನುಗಳನ್ನು ಸಾಗಿಸಲಿಕ್ಕೆ ವಾಹನಗಳು ಇರಬಾರದು ಅಂತ ಸರಕಾರದವರ ಉದ್ದೇಶವೇನೋ ಎಂದು ನನಗನಿಸುತ್ತದೆ.

ಸದ್ಯದಲ್ಲಿ ಇರುವ ತೆರಿಗೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲದೆ ಅನೇಕ ಜನ ಬಸ್ ಮತ್ತು ಲಾರಿಗಳನ್ನು ನಡೆಸುತ್ತಿರುವವರು ಸಾಹುಕಾರರ ಹತ್ತಿರ ಸಾಲ ಮಾಡಿ ಹಣ ತೆಗೆದುಕೊಂಡು ನಂಪಾದನೆ ಮಾಡಿದ್ದನ್ನೆಲ್ಲ ಬಡ್ಡಿಗೆ ಕೊಡುವುದಕ್ಕೆ ಆಗಿದೆ. ಬಸ್ ಮಾಲೀಕರಲ್ಲಿ ಬಹಳ ಮಂದಿ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ.

ಒಳ್ಳೆಯ ಬಸ್ ಮಾರ್ಗಗಳನ್ನೆಲ್ಲ ನರ್ಕಾರದವರು ರಾಷ್ಟ್ರೀಕರಣ ಮಾಡಿದ್ದಾರೆ. ಎಲ್ಲ ಮಾರ್ಗಗಳನ್ನೂ ಅವರು ತೆಗೆದುಕೊಂಡಿಲ್ಲ. ಇದರಿಂದ ಪೂರ್ತಿಯಾಗಿ ರಾಷ್ಟ್ರೀಕರಣ ಮಾಡಿದ ಹಾಗೂ ಇಲ್ಲ, ಪೂರ್ತಿಯಾಗಿ ಕೈ ಬಿಟ್ಟಹಾಗೂ ಇಲ್ಲ. ನರ್ಕಾರದವರು ಕೆಲವು ಬಸ್ ಮಾರ್ಗಗಳನ್ನು ಮಾತ್ರ ರಾಷ್ಟ್ರೀಕರಣ ಮಾಡಿರುವುದರಿಂದ ಆ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿನುತ್ತಿದ್ದ ಬಸ್ ಮಾಲೀಕರುಗಳಿಗೆ ತೊಂದರೆಯಾಗಿದೆ. ಇದೇ ಮಾರ್ಗಗಳಲ್ಲಿ ಇವರಿಗೆ ಬೇಕಾದಾಗ ಬೇಕಾದ ವರಿಗೆ ಬಸ್ ರೂಟ್ ಕೊಡುವುದನ್ನು ಸಹ ನಾವು ನೋಡಬಹುದು. ಹೀಗೆ ಒಂದು ಸ್ಥಿಮಿತವಾದ ಪರಿಸ್ಥಿತಿ ಇಲ್ಲದೆ ಬಸ್ ಮಾಲೀಕರ ಪರಿಸ್ಥಿತಿಯೂ ಕಾಡ ಬಹಳ ಕೆಟ್ಟು ಅವರು ಬಹಳ ಕಷ್ಟ ದೆನೆಯಲ್ಲಿ

ದ್ದಾರೆ. ಈ ಪರಿಸ್ಥಿತಿಯಲ್ಲಿ ತೆರಿಗೆಯ ಭಾರವನ್ನು ಹೆಚ್ಚು ಮಾಡಿ ಇದಕ್ಕೆ ಕಾರಣ ಏನು ಹೇಳುತ್ತಾರೆಂದರೆ ಎಲ್ಲ ಪ್ರಾಂತಗಳಲ್ಲಿಯೂ ಹೆಚ್ಚಾಗಿರುವುದರಿಂದ ನಾವೂ ಇಲ್ಲಿ ಜಾಸ್ತಿ ಮಾಡಬೇಕಾಗಿದೆ ಮತ್ತು ನಮ್ಮ ಪಂಚವಾರ್ಷಿಕ ಯೋಜನೆಗಳಿಗೆ ಹಣ ಬೇಕಾಗಿದೆ ಎಂದು. ಇವೆಲ್ಲ ಮಾಮೂಲು ಹೇಳತಕ್ಕ ಸಂಗತಿಗಳೇ ಆಗಿವೆ. ಈ ದಿವಸ ಬೇರೆ ಪ್ರಾಂತ್ಯಗಳಲ್ಲಿ ಕಡಮೆ ಇರುವುದನ್ನು ನಮ್ಮ ರಾಜ್ಯದಲ್ಲಿಯೂ ಅನ್ಯಾಯಿಸಿ ಕಡಮೆ ಮಾಡುವುದಕ್ಕೆ ತಯಾರಿಲ್ಲ. ಕಡಮೆ ಇರುವುದನ್ನು ಯಾವತ್ತಿಗೂ ಗಮನಕ್ಕೆ ತೆಗೆದುಕೊಳ್ಳುವುದೇ ಇಲ್ಲ. ಜನ ಏನು ಹೇಳುತ್ತಾರೆ ಎಂದರೆ ಎಲ್ಲ ತೆರಿಗೆಯನ್ನೂ ಹಾಕಿದ್ದೀರಿ ಇನ್ನು ಉಳಿದಿರುವುದು ತಲೆಕಂದಾಯ ಹಾಕುವುದು ಮಾತ್ರ ಎಂದು ಹೇಳುತ್ತಾರೆ. ಜನರ ಅಭಿಪ್ರಾಯ ಹೀಗೆ ಇದೆ. ತೆರಿಗೆಯನ್ನು ಬಸ್ಸುಗಳು ಮತ್ತು ಲಾರಿಗಳ ಮೇಲೆ ಹಾಕುತ್ತೇವೆ ಎಂದು ಹೇಳಿದರೂ ಇದು ಸಾಮಾನ್ಯ ಜನರಿಂದಲೇ ವಸೂಲಾಗಬೇಕಾಗಿದೆ. ಈಗಿರುವ ತೆರಿಗೆಯ ಭಾರವೇ ಜಾಸ್ತಿಯಾಗಿರುವಾಗ ಇನ್ನೂ ಹೆಚ್ಚು ಮಾಡುವುದು ನ್ಯಾಯವಲ್ಲ, ಇದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತದೆ, ಇದನ್ನು ಹೆಚ್ಚು ಮಾಡಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I extend the time by half-an-hour. But the member may take ten minutes only.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಸ್ವಾಮಿ, ನನ್ನ ಸ್ನೇಹಿತರಾದ ಶ್ರೀಮಾನ್ ವೆಂಕಟಗಿರಿಯಪ್ಪನವರು ಬಸ್ಸಿನವರ ವಿಚಾರವಾಗಿ ಮಾತನಾಡುತ್ತ ಅವರಿಗೆ ಅನೇಕ ತೊಂದರೆಗಳಿವೆ ಎಂದು ಹೇಳಿದರು. ನಮ್ಮ ಜಿಲ್ಲೆಯಲ್ಲಿ ನಾನು ನೋಡಿದ್ದೇನೆ. ಎಷ್ಟೋ ಜನ ಮಾಲೀಕರು ಅವರಿಗೆ 'To and fro journey'ಗೆ ಪರ್ಮಿಟ್ ಇದ್ದರೆ ಆದೇ ವಾಹನವನ್ನೇ ಐದಾರು ಸಲ ಓಡಿಸುತ್ತಾರೆ. ಪರ್ಮಿಟ್ ನಲ್ಲಿರುವ ನಿಬಂಧನೆಯನ್ನು ಉಲ್ಲಂಘಿಸಿ ಓಡಿಸುತ್ತಾರೆ. ಇದರಿಂದಾಗಿ ಅವರಿಗೆ ಏನೂ ಬಾಧಕವಾಗುವುದಿಲ್ಲವೆಂದು ನಾನಾದರೂ ತಿಳಿದುಕೊಂಡಿದ್ದೇನೆ.

(MR. DEPUTY SPEAKER IN THE CHAIR)

ಬಸ್ಸಿನವರು ಹೇಗಾದರೂ ಮಾಡಿ ದುಡ್ಡು ಮಾಡಿಕೊಳ್ಳುತ್ತಾರೆ. ಅದರಲ್ಲಿ ನನಗೆ ಅನುಭವವಿದೆ. 1923ನೆ ಇಸವಿಯಿಂದ 1952ನೆ ಇಸವಿಯವರೆಗೂ ರಸ್ತೆಗಳಲ್ಲಿ ಬಸ್ಸುಗಳನ್ನು ಹಾಕಿ ನಡೆಸತಕ್ಕ ವಹಿವಾಟಿನಲ್ಲಿದ್ದು ಆ ವ್ಯವಹಾರ ನನಗೆ ಚೆನ್ನಾಗಿ ಗೊತ್ತಿದೆ. ಲಾರಿಗಳ ಮೇಲೆ ಇಷ್ಟು ತೆರಿಗೆಯನ್ನು ಜಾಸ್ತಿ ಹಾಕುತ್ತ ಇರುವುದರಿಂದ ದೇಶಕ್ಕೆ ನಾಲ್ಕು ತರಹ ಅನ್ಯಾಯಗಳನ್ನು ಮಾಡಿದಹಾಗೆ ಆಗುತ್ತದೆ. ಇದರಿಂದ ಒಂದು ಉದ್ಯಮವನ್ನು ಕೊಲೆ ಮಾಡುತ್ತಿದ್ದೀರಿ. ಅದನ್ನು ಕೊಲೆ ಮಾಡುವಾಗ ಕನ್ಸ್ಯೂಮರ್ ಗುಡ್ಸ್ ಮೇಲೆ ಪರಿಣಾಮ ಮಾಡುತ್ತದೆ ಎನ್ನತಕ್ಕದ್ದು, ಲಾರಿ ಇಟ್ಟುಕೊಂಡಿರುವ ಪರಿಗೆ ನರ್ಕಾರದ ಅಧಿಕಾರಿಗಳಿಂದ ಆಗತಕ್ಕ ಕಿರುಕುಳ, ಪೋಲೀಸಿನವರಿಂದ ಆಗತಕ್ಕ ಕಿರುಕುಳ, ಇದರಿಂದ ಎಷ್ಟು ಅನ್ಯಾಯವಾಗುತ್ತಿದೆ ಎಂದು ತಿಳಿದುಕೊಂಡರೆ ದಿನೇ ದಿನೇ ಲಾರಿಗಳ ಮೇಲೆ ತೆರಿಗೆಯನ್ನು ಹೆಚ್ಚು ಮಾಡುವುದು ಸರಿ ಕಾಣುವುದಿಲ್ಲವೆಂದು ನನಗಾದರೂ ಅನ್ನಿಸುತ್ತದೆ.

ತಾವು ಮೂರನೆಯ ಯೋಜನೆಯನ್ನು ಕಾರ್ಯಗತಗೊಳಿಸಬೇಕು ಎಂದು ಪದಾರ್ಥಗಳನ್ನು ಹೊತ್ತು ಸಂಚಾರ ಮಾಡತಕ್ಕ ಈ ಲಾರಿಗಳ ಮೇಲೆ ಇಷ್ಟು ಉಗ್ರವಾದಕ್ರಮ ತೆಗೆದುಕೊಂಡಿರುವುದು ಸರ್ವಥಾ ಸರಿಯಲ್ಲ. ಜನ ನಿಮಗೆ ಹಣಕೊಡುತ್ತಾರೆ. ಹಣಕೊಟ್ಟ ಜನಗಳಿಗೆ ನಿಮ್ಮಲ್ಲಿ ಏನಾದರೂ ಫಲ ಸಿಕ್ಕುತ್ತದೆಯೇ? ಆರ್. ಟಿ. ಎ. ಮತ್ತು ಎಸ್. ಟಿ. ಎ. ಆಫೀಸುಗಳು ಚೆನ್ನಾಗಿ ಹಣ ಸಂಪಾದನೆ ಮಾಡತಕ್ಕ ಕೇಂದ್ರಗಳಾಗಿವೆ. ಬೆಂಗಳೂರು ಕಸಿಂಗಹ್ಯಾಂ ರಸ್ತೆಯಲ್ಲಿರುವ ಆರ್. ಟಿ. ಎ. ಆಫೀಸಿನಲ್ಲಿ ಏನು ನಡೆಯುತ್ತದೆ ಎಂದು ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಲಕ್ಷಾಂತರ ರೂಪಾಯಿ ವ್ಯಾಪಾರ ನಡೆದು ಒಳ್ಳೆಯ ಹಣ ಸಂಪಾದನೆಯಾಗುತ್ತದೆ. ಜನತೆಯ ನಿರೀಕ್ಷೆಯನ್ನು ಮೀರಿ ಹಣವನ್ನು ಸೆಳೆಯುತ್ತಾರೆ. ಈ ಉದ್ಯಮದಿಂದ ಯಾರು ಜೀವನವನ್ನು ಮಾಡುತ್ತಿದ್ದಾರೆಯೋ ಅವರ ವಿಷಯದಲ್ಲಿ ಇಷ್ಟು ಕ್ರೂರಿಗಳಾಗಿ ಇರಬಾರದು ಎಂದು ನಾನು ಬಹಳ ವಿನಯದಿಂದ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ನನ್ನ ಇಲಾಖೆ ಎಷ್ಟು ಹಣ ತರುತ್ತದೆ, ಮಾರಾಟ ತೆರಿಗೆಯಷ್ಟೇ ಹಣವನ್ನು ತರುತ್ತದೆ, ಆರ್ಮಿ ಆಫ್ ಆಫೀಸರ್ಸ್ ಇಟ್ಟಿದ್ದೇನೆ ಎಂದು ಮಾನ್ಯಮಂತ್ರಿಗಳು ಹೇಳುತ್ತಾರೆ. ಎಷ್ಟು ಲಾರಿಗಳು ಮತ್ತು ಮೋಟಾರುಗಳು ಪರ್ಮಿಟ್ ಇಲ್ಲದೆ ತಿರುಗುತ್ತವೆ ಎನ್ನುವುದಕ್ಕೆ ನನ್ನ ಜೊತೆಯಲ್ಲಿ ವೇಷ ಮರೆಸಿಕೊಂಡು ಬಂದರೆ ತೋರಿಸುತ್ತೇನೆ. ಸಾವಿರ ರೂಪಾಯಿ, ಐದುನೂರು ರೂಪಾಯಿ ಹೀಗೆ ಸಂಬಳ ಪಡೆಯತಕ್ಕ ಸ್ಕ್ವಾಡ್‌ಗಳೇನಿವೆ ಅವು ಎಷ್ಟು ಲಾರಿ ಮತ್ತು ಎಷ್ಟು ಮೋಟಾರುಗಳನ್ನು ಹಿಡಿದಿವೆ? ಎಷ್ಟು ದೂರುಗಳನ್ನು ಕೊಟ್ಟಿರೂ ಆ ಕಡೆ ನಿಗಾ ಮಾಡಿದೆಯೇ ಎಂದರೆ ಏನೂ ಇಲ್ಲ. ಹೀಗಿರುವಾಗ ಕಿರಿಕಿರಿ ಏಕೆ ಮಾಡುತ್ತೀರಿ?

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇದಲ್ಲದೆ ಈಗ ಚಾಸಿಗಳ ಕೊರತೆ ಇದ್ದು, ಡೀಸಲ್ ಎಣ್ಣೆಯ ಬೆಲೆ ಜಾಸ್ತಿಯಾಗಿದ್ದು, ಟೈರು ಮತ್ತು ಟ್ಯೂಬುಗಳ ಬೆಲೆ ಜಾಸ್ತಿಯಾಗಿದ್ದು ಬಸ್ ಮತ್ತು ಲಾರಿ ಮಾಲೀಕರುಗಳಿಗೆ ಬೇಕಾದ ಸಾಮಾನುಗಳು ಸರಿಯಾಗಿ ಸಿಕ್ಕುತ್ತಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಲಾರಿ ಮಾಲೀಕರಿಗೆ ಮೈಸೂರು ಸರ್ಕಾರದ ಚಿತ್ರಣಿಯಾಗಿರಬೇಕು. ರೈಲಿನಲ್ಲಿ ಸ್ಥಳಸಿಕ್ಕದೆ ಇರುವಾಗ, ರೈಲಿನಲ್ಲಿ ಸಾಮಾನುಗಳನ್ನು ಸಾಗಿಸುವುದಕ್ಕೆ ಅವಕಾಶವಿಲ್ಲದೆ ಇರುವ ಹೊತ್ತಿನಲ್ಲಿ ತಮಗೆ ಎಷ್ಟೋ ಕಷ್ಟವಿದ್ದರೂ, ಇವತ್ತು ಬೊಂಬಾಯಿನಿಂದ ಸಾಮಾನುಗಳನ್ನು ಹೊತ್ತು ಹೊರಟು ನಾಳೆ ಬೆಳಗ್ಗೆ ಈ ಊರಿನಲ್ಲಿ ಡೆಲಿವರಿ ಕೊಡುತ್ತಾರೆ. ಅದನ್ನೇ ರೈಲಿನಲ್ಲಿ ಬುಕ್ ಮಾಡಿದರೆ ತಿಂಗಳುಗಟ್ಟಲೆಯಾದರೂ ಸಾಮಾನು ಬರುವುದಿಲ್ಲ. ಅಂಥವರ ಮೇಲೆ, ರಾತ್ರಿ ಹಾಗೂ ಹಗಲೂ ಕಣ್ಣಿಲ್ಲಿ ಎಣ್ಣೆ ಹಾಕಿಕೊಂಡು ಜೀವನವನ್ನೇ ಪಣವಾಗಿಟ್ಟು, ಜೀವನದ ಹಂಗು ತೊರೆದು ಕೆಲಸಮಾಡುತ್ತಾರೆ. ಇಂಥ ವಾಹನಗಳ ಮಾಲೀಕರು ಒಂದು ಕೌಂಟರ್ ಫಾಯಿಲ್‌ಗೆ ಅಧಿಕಾರಿಗಳ ರುಜು ಪಡೆಯಬೇಕು ಎಂದರೆ ನಾಲ್ಕೈದು ದಿನಗಳ ವರೆಗೂ ಕಾಯಬೇಕು. ತಮ್ಮ ಎಸ್. ಟಿ. ಎ. ಆಫೀಸಿನಲ್ಲಿ ಹೋಗಿ ಇದನ್ನೆಲ್ಲ ನೋಡಬಹುದು, ಸರ್ಕಾರದ ಮುಖ್ಯಮಂತ್ರಿಗಳಿಂದ ಹಿಡಿದು ಎಲ್ಲ ಮಂತ್ರಿಗಳನ್ನೂ ನೋಡಬಹುದು. ಆದರೆ ಯಾರಾದರೂ ಬಡವನಾದವನು ಎಸ್. ಟಿ. ಎ. ಅಧಿಕಾರಿಯನ್ನು ನೋಡಬೇಕು ಎಂದರೆ ಸಾಧ್ಯವಿಲ್ಲ. ಹಣ ಕಾನು ಇರುವವರು ಮಾತ್ರ ಹೋಗಿ ತಮ್ಮ ಕೆಲಸಕಾರ್ಯಗಳನ್ನು ಮಾಡಿಕೊಂಡು ಬರುವುದಕ್ಕೆ ಸಾಧ್ಯವಿದೆ. ಇಂಥ ಹೊತ್ತಿನೊಳಗೆ ಇದು ಎಷ್ಟರಮಟ್ಟಿಗೆ ಜನತೆಯ ಸಹಾಯ ತರುತ್ತದೆ ಎಂದು ನಾನು ತಮ್ಮಲ್ಲಿ ಕೇಳುತ್ತೇನೆ.

ಬ್ರೇಕ್ ಇನ್‌ಸ್ಪೆಕ್ಟರುಗಳ ವಿಚಾರ ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಅವರು ಇನ್‌ಸ್ಪೆಕ್ಟ್ ಮಾಡುವಾಗ ಗಾಡಿಗಳಿಗೆ ಸರಿಯಾಗಿ ಬ್ರೇಕುಗಳೇ ಇರುವುದಿಲ್ಲ. ಶ್ರೀವಾನ್ ಭಾಸ್ಕರ ಶೆಟ್ಟರು ಹೇಳುತ್ತಾರೆ, ಅವರಿಗೆ ಬ್ರೇಕ್ ಇರುವುದಿಲ್ಲ ಎಂದು. ಬ್ರೇಕ್ ಇಲ್ಲದ ಗಾಡಿಯಂತೆ ಅವರು ಯಾರ ಜೀವನವಾದರೂ ಕೈ ಇಡುತ್ತಾರೆ. ಅವರು ಏನು ಹಾನಿಯನ್ನುಂಟುಮಾಡುತ್ತಿದ್ದಾರೆಂದು ನಾನು ಹೇಳುತ್ತಿದ್ದೇನೆ. ನಾನು ತೆರಿಗೆ ಕೊಡಬೇಕೆಂದು ಹೇಳುತ್ತಿದ್ದೀರಿ. ತೆರಿಗೆ ಕೊಡುವುದಕ್ಕೆ ಅದರಿಂದ ಜನಗಳಿಗೆ ಒಳ್ಳೆಯದಾಗುವುದಾದರೆ, ರಕ್ಷಣೆ ಸಿಕ್ಕುವುದಾದರೆ, ಮಾನ ಮರ್ಯಾದೆ ಉಳಿಯುವುದಾದರೆ ತಾವು ಇದನ್ನೆಲ್ಲ ಸ್ವಲ್ಪ ನೋಡಿಕೊಂಡು ವ್ಯವಹಾರ ಮಾಡಬೇಕೆಂದು ಹೇಳುತ್ತೇನೆ.

ಲಾರಿ ಮಾಲೀಕರುಗಳು ಇನ್ನೂ ಒಂದು ದೊಡ್ಡ ಸರ್ವಿಸ್ ಮಾಡುತ್ತಿದ್ದಾರೆ. ಅವರು ಇಬ್ಬರು ಡ್ರೈವರ್, ಇಬ್ಬರು ಕ್ಲೀನರುಗಳನ್ನು ಕೆಲಸದಲ್ಲಿ ಇಟ್ಟುಕೊಂಡಿರುತ್ತಾರೆ. ಅವರು ಈ ದೇಶದಲ್ಲಿರುವ ನಿರುದ್ಯೋಗ ಸಮಸ್ಯೆಯನ್ನು ಕೂಡ ಸ್ವಲ್ಪಮಟ್ಟಿಗೆ ನಿವಾರಣೆ ಮಾಡಿದ್ದಾರೆ.

ರಾಜ್ಯದಲ್ಲಿರುವ ಲಾರಿ ಮಾಲೀಕರುಗಳಿಗೆ ಎಷ್ಟು ಕಷ್ಟವಿದೆ ಎಂದರೆ ಅವರಿಗೆ ಯಾವುದಾದರೂ ಬೆಂಜ್ ಗಾಡಿಯ ಸಾಮಾನುಗಳು ಸಿಕ್ಕಬೇಕಾದರೆ ಕಷ್ಟವಿದೆ, ಒಂದುನಟ ಬಿಚ್ಚಿ ಅದನ್ನು ಕ್ಲೀನ್ ಮಾಡಬೇಕಾದರೆ ಮೂರರಿಂದ ಐದುಸಾವಿರ ರೂಪಾಯಿಗಳವರೆಗೂ ಖರ್ಚು ಬರುತ್ತದೆ. ಎಷ್ಟೋ ಜನ ತಮ್ಮ ಮನೆಮಠಗಳನ್ನು ಕೂಡ ಮಾಡಿ ಒಂದೊಂದು ಲಾರಿಯನ್ನು ಕೊಂಡುಕೊಂಡಿದ್ದಾರೆ.

3-00 P.M.

ಅವರ ಅದೃಷ್ಟ ಚೆನ್ನಾಗಿ ದುಡಿಮೆಮಾಡಿದರೆ, ಅವರ ತಂದೆ ತಾಯಿಗಳು ಇಟ್ಟ ಆಸ್ತಿ ಉಳಿಯುತ್ತದೆಯೇ ಹೊರತು ಇದರಿಂದ ಖಂಡಿತ ಶ್ರೀಮಂತರು ಆಗುವುವಿಲ್ಲ. ಮಹಾಲಕ್ಷ್ಮೀ ಟ್ರಾನ್ಸ್‌ಪೋರ್ಟ್, ಫಾಚ್ಚೆ ಅಂಡ್ ಪಾಟೀಲ್ ಅಂತ ಹೇಳಿ ನಮ್ಮ ನ್ಯಾಷನಲ್ ಹೈವೇ ನಂಬರ್ 4ರಲ್ಲಿ 400-500 ಗಾಡಿಗಳು ಓಡಾಡುತ್ತಾ ಇರುತ್ತವೆ. ಅವರ ಹೆಂಡತಿ ಮಕ್ಕಳ ಮುಖ ಅವರು ನೋಡಿ ತಿಂಗಳು ಗಟ್ಟಲೇ ಆಗಿರುತ್ತದೆ. ಅವರು ಒಂದು ದಾರಿಯಲ್ಲಿ ದುಡಿಯುತ್ತಾ ಇದ್ದಾರೆ ಈ ರಾಷ್ಟ್ರದ ಅಭ್ಯುದಯಕ್ಕೆ, ಕಲ್ಯಾಣಕ್ಕೆ; ಈ ರಾಷ್ಟ್ರವನ್ನು ಕಟ್ಟುವುದಕ್ಕೆ ಅವರು ತಮ್ಮ ಸೇವೆಯನ್ನು ನೆಲ್ಲಿಸುತ್ತಾ ಇದ್ದಾರೆ, ಅಂತಹವರ ಮೇಲೆ ನೀವು ದಿನೇ ದಿನೇ ಈ ರೀತಿ ಹೊರೆ ಹಾಕುವುದು ಒಳ್ಳೆಯದಲ್ಲ. ಈಗ ಒಂದು ಸಾಮಾನು ಬೊಂಬಾಯಿನಿಂದ ಬೆಂಗಳೂರಿಗೆ ರೈಲಿನಲ್ಲಿ ಬಂದರೆ 9 ರೂಪಾಯಿ ಆಗುತ್ತದೆ. ಅದೇ ಲಾರಿಯಲ್ಲಿ ಬರಬೇಕಾದರೆ 12 ರೂಪಾಯಿ ಆಗುತ್ತದೆ. ಏಕೆಂದರೆ ಅವನು 14 ಗಂಟೆಗಳ ಕಾಲದಲ್ಲಿ ಬೊಂಬಾಯಿನಿಂದ ಹೊರಟು ಬೆಂಗಳೂರನ್ನು ತಲುಪಬೇಕಾಗುತ್ತದೆ. ಅವನು ಯಾವ ವೇಗದಲ್ಲಿ ಬರಬೇಕು ಎಂಬುದನ್ನು ತಾವು ಊಹಿಸಬೇಕು. ಈ ದಿನ ಬೆಳಿಗ್ಗೆ ಇದೇ ಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ತುರ್ತುಪರಿಸ್ಥಿತಿ ಬಂದದ್ದರಿಂದ ಯಾರನ್ನೂ ಕೇಳಲಲ್ಲ ಎಂದು ಹೇಳಿದಿರಿ ಹಾಗೆಯೇ ಬೆಂಗಳೂರಿನಲ್ಲಿ ಒಂದು ಪದಾರ್ಥ ಸಿಕ್ಕುವುದಿಲ್ಲ ಏಂದರೆ ಎಷ್ಟು ಶೀಘ್ರವಾಗಿ

ಅದನ್ನು ತರಿಸುವುದಕ್ಕೆ ಅವರು ಉತ್ಸುಕರಾಗಿ ಕೆಲಸಮಾಡುತ್ತಾರೆ ಎಂಬುದನ್ನು ತಾವು ನೋಡ ಬೇಕು. ಅಂತಹವರಮೇಲೆ ದಿನೇ ದಿನೇ ಈ ತೆರಿಗೆಯ ಭಾರ ಹೆಚ್ಚುಮಾಡುತ್ತಾ ಹೋಗುವುದು ಸಮಂಜಸವಲ್ಲ.

ಆರ್. ಟಿ. ಎ. ಆಫೀಸರುಗಳು ಹೋಗಲಿ ತಮ್ಮ ಅಧೀನದಲ್ಲಿರತಕ್ಕ ಪೋಲೀಸಿನವರ ಕಾಟ ವನ್ನಾದರೂ ತಪ್ಪಿಸುತ್ತೀರಾ ? ಬೊಂಬಾಯನ್ನು ಬಿಟ್ಟು ಲಾರಿ ಬೆಂಗಳೂರನ್ನು ತಲುಪುವ ಹೊತ್ತಿಗೆ ಒಂದು ಎವರ್‌ಗ್ರೀನ್ ನೋಟು ತುಕ್ಕಡ ಆಗಿರುತ್ತದೆ, ಎಲ್ಲಾ ಸ್ಟೇಷನ್‌ನಲ್ಲೂ ಬಿಟವಾಡೆ ಆಗಬೇಕು, ಇದು ನಾಚಿಕೆಗೇಡು. ಮೈಸೂರು ಸಂಸ್ಥಾನದಲ್ಲಿ ಪೋಲೀಸಿನವರು ಈ ರೀತಿ ಮಾಮೂಲು ವಸೂಲು ಮಾಡುತ್ತಾ ಇರುವುದನ್ನು ತಾವು ಸ್ವಲ್ಪ ನೋಡಬೇಕು. ಒಂದು ಪುಸ್ತಕ ಇಟ್ಟುಕೊಂಡಿರುತ್ತಾರೆ, ಅದರಲ್ಲಿ ಏನು ರುಜು ಹಾಕಿಸಿಕೊಳ್ಳುತ್ತಾರೋ ಏನೋ, ಅಂತೂ ಆ ಲಾರಿಯಿಂದ ತಕ್ಷಣ ಆ ಡ್ರೈವರ್‌ನ ಮುಂದೆ ಹಿಡಿಯುತ್ತಾನೆ, ಅವನು ಅದರೊಳಗೆ ಎಷ್ಟುಕೊಡಬೇಕೋ ಅಷ್ಟನ್ನು ಇಟ್ಟುಬಿಡು ತ್ತಾನೆ, ಇದು ನಡೆದೇ ಇರುತ್ತದೆ. ಇದನ್ನು ಏಕೆ ಹೇಳುತ್ತೇನೆ ಎಂದರೆ ನಿಜವಾಗಿಯೂ ಕೂಡ ಈ ಇಂಡಸ್ಟ್ರೀಸ್ ಏನಿದೆ ಇದಕ್ಕೆ ನಾನಾ ಮುಖದ ತೊಂದರೆಗಳು ಇರುವಾಗ ಅದರ ಜೊತೆಗೆ ಇವರನ್ನು ಪೋಲೀಸಿನವರ ಇಕ್ಕಟ್ಟಿಗೆ ಹಾಕುವುದರಿಂದ ಶ್ರೀಮಾನ್ ವೆಂಕಟೇಗೌಡರು ಹೇಳಿದ ಹಾಗೆ ಈ ಇಂಡ ಸ್ಟ್ರಿಯೇ ಬಿದ್ದುಹೋಗುತ್ತದೆ. ಇಂಡಿಯನ್ ಚೈರ್ ಆಗಲಿ, ಫೈರ್ ಸ್ಟೋನ್‌ಚೈರ್ ಆಗಲಿ, ಯಾರನ್ನೂ ಕೇಳಿದರೂ ಚೈರ್ ಇಲ್ಲ ಎಂದು ಹೇಳುತ್ತಾರೆ, ಮಾರ್ಕೆಟ್ ರೇಟ್‌ಗಿಂತ 200 ರೂಪಾಯಿ ಜಾಸ್ತಿ ಕೊಟ್ಟರೆ ಚೈರ್ ಸಿಕ್ಕುತ್ತದೆ, ಇವತ್ತು ಹೆವಿ ಡ್ಯೂಟಿ ಚೈರ್ ಹಾಕದಿದ್ದರೆ ಲಾರಿ ಓಡಿಸಿ ಲಾಭ ಪಡೆ ಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದು ಬಹಳ ಅನ್ಯಾಯದ ಮಾತು, ಯಾರು ಇದನ್ನು ಮಾಡ ಬೇಕೆಂದು ಹೇಳಿದರೋ ಗೊತ್ತಿಲ್ಲ, 6 ರೂಪಾಯಿ ಖರ್ಚುಮಾಡಿ 12ರೂಪಾಯಿ ಆದಾಯ ಕೊಡು ತ್ತೇನೆ ಎಂದು ಜತ್ತಿಯವರಿಗೆ ನೀವು ಹೇಳಿದರಾ ? ಇಷ್ಟೆಲ್ಲಾ ಸಾಲ ಸೋಲ ಮಾಡಿ, ಇಷ್ಟೆಲಾ ಟ್ಯಾಕ್ಸ್ ಹಾಕಿ ಮೂರನೆ ಯೋಜನೆಯಲ್ಲೂ ಸಹ ಜನ ನಿರೀಕ್ಷಣೆ ಮಾಡಿದ ಕೆಲಸ ಮಾಡುವುದಕ್ಕೆ ನಿಮ್ಮಿಂದ ಸಾಧ್ಯವಿಲ್ಲ, ಮಾಡುವುದಕ್ಕೆ ಆಗುವುದೂ ಇಲ್ಲ, ಹಾಗಿರುವಾಗ ಮತ್ತೆ ಏಕೆ ತೆರಿಗೆ ಹಾಕು ತ್ತೀರಿ ? ನೀವು ಸ್ವಲ್ಪ ಒಳ್ಳೆಯವರು ನಿಮಗೆ ಹೃದಯ ಇದೆ ಎಂದು ನಾನು ತಿಳಿದುಕೊಂಡಿದ್ದೆ. ನೀವು ಬರುಬರುತ್ತಾ ಚೈನಾಗಡಿಯಲ್ಲಿ ಹೋಗಿ ಅವರ ತತ್ವಕ್ಕೆ ತುತ್ತಾಗುತ್ತಾ, ಇದ್ದೀರಿ ಎಂದು ನನಗೆ ಅನಿಸುತ್ತಾ ಇದೆ. ನೀವು ನರಸಿಂಹ ರಾಜಾರೋಡ್, ಚಾಮರಾಜಪೇಟೆ, ಸಿಲ್ವರ್‌ಜ್ಯೂಬಲಿ ಪಾರ್ಕ್‌ರೋಡು, ಟೌನ್ ಹಾಲ್ ಇಲ್ಲೆಲ್ಲಾ ಹೋಗಿ ನೋಡಿ, ನಿಮಗೆ ಅರ್ಥವಾಗುತ್ತದೆ ಅವರು ಎಷ್ಟು ಕಷ್ಟಪಡುತ್ತಾ ಇದ್ದಾರೆ ಎಂಬುದು. ಒಂದು ಸಾಮಾನೂ ಸಿಕ್ಕುವುದಿಲ್ಲ, 3-4-5 ದಿನ ಸಾಮಾನು ಸಿಕ್ಕದೇ ಲಾರಿ ಸುಮ್ಮನೆ ನಿಂತಿರುತ್ತದೆ; ಅದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ಎಂದರೆ ಏನೂ ಮಾಡಿಲ್ಲ, ನಮಗೆ ಕೊಡಬೇಕಾದ ಸುಂಕ ಕೊಡಿ, ನಾವು ಏನೂ ಮಾಡುವುದಿಲ್ಲ ಎಂದು ಹೇಳುವುದು ಧರ್ಮವಲ್ಲ. ಇವತ್ತು ತೆರಿಗೆ ಕೊಡಬೇಕು ಎಂದರೆ ಅವರಿಗೆ ಬೇಕಾದ ಚೈರು ಮತ್ತು ಇತರ ಸಾಮಾನುಗಳು ದೊರೆಯುವಂತೆ ಸೂಕ್ತವಾದ ಒಂದು ವ್ಯವಸ್ಥೆಯನ್ನು ಮಾಡಿ. ಮುರ್ಸಿಡೀಸ್ ಬೆಂಜ್‌ಗೆ ಲೈಸೆನ್ಸ್ ಪಡೆದುಕೊಂಡ ಪಾರ್ಟಿ ಇನ್ನಾರಾದರೂ ಅದಕ್ಕೆ ಆತರುವಾಗಿರುವವರು ಕೇಳಿ ದರೆ ಅದಕ್ಕೆ 14 ಸಾವಿರ ರೂಪಾಯಿ ಹೆಚ್ಚಿಗೆ ಕೊಡಬೇಕಾಗುತ್ತದೆ. ಆ ರೀತಿ ಕೊಡುವುದಕ್ಕೂ ತಯಾರಾಗಿರುವವರು ಇದ್ದಾರೆ, ಲೇ ಲೆಂಡ್ ಬಸ್‌ಗೆ 19—20 ಸಾವಿರ ರೂಪಾಯಿ ಹೆಚ್ಚಿಗೆ ಕೊಟ್ಟು ತೆಗೆದುಕೊಳ್ಳುವವರು ಇದ್ದಾರೆ, ಏಕೆಂದರೆ ಅದರಲ್ಲೇ ಅವರು ಜೀವನ ಮಾಡಬೇಕು ಇನ್ನಾವುದರಲ್ಲೂ ಕೈಹಾಕುವುದಕ್ಕೆ ಅವರಿಂದ ಆಗುವುದಿಲ್ಲ. ಹೀಗಿರುವಾಗ ಲಾರಿ ಮಾಲೀಕರ ಗಾಡಿ ಸ್ಕ್ರಾಪ್ ಮಾಡಿ ದಾಗ, ಅದು ಮುರಿದು ಬಿದ್ದಾಗ ಅದನ್ನು ಓದಗಿಸಿಕೊಡುವುದಕ್ಕೆ ಏನಾದರೂ ವಿಶೇಷ ಮಾಡಿ ದ್ದೀರಾ ? ನಿಮಗೆ ತೆರಿಗೆ ಹಾಕುವುದಕ್ಕೆ ರಾಜ್ಯಾಂಗದಲ್ಲಿ ಅವಕಾಶವಿದೆ ಎಂದು ನೀವು ಹೇಳುತ್ತೀರಿ, ರಿಪೇರಿ ಮಾಡತಕ್ಕ ಸಾಮಾನುಗಳು ಏನಾದರೂ ಅವರಿಗೆ ಬೇಕಾದ ಪಕ್ಷದಲ್ಲಿ ಅದಕ್ಕೆ ಯಾವುದಾ ದರೂ ವ್ಯವಸ್ಥೆ ಮಾಡಿದ್ದೀರಾ ಎಂದು ನಾನು ತಮ್ಮನ್ನು ಕೇಳುತ್ತಾ ಇದ್ದೇನೆ. ಮದರಾಸಿನವರು ಮುಂದೆ ಬಂದಿದ್ದಾರೆ, ಪಂಜಾಬಿನವರು ಮುಂದೆ ಬಂದಿದ್ದಾರೆ, ಲೇ ಲೆಂಡ್‌ಗೆ ಬೇಕಾದ ಸಾಮಾನುಗಳನ್ನು ಮದರಾಸಿನಲ್ಲಿ ತಯಾರುಮಾಡಿ ಮಾರಾಟ ಮಾಡುತ್ತಾರೆ. ಹಾಗಿರುವಾಗ ತಮ್ಮ ಕೈಗಾರಿಕಾ ಪುರೋಭಿವೃದ್ಧಿಯಲ್ಲಿ ಈ ಬಸ್ಸುಗಳಿಗೆ ಬೇಕಾಗತಕ್ಕ ಯಾವುದೇ ಒಂದು ಸಾಮಾ ನನ್ನು ಮಾತುವುದಕ್ಕೆ ಯಾವುದಾದರೂ ಕಾರ್ಖಾನೆಯನ್ನು ತೆಗೆದಿದ್ದೀರಾ ? ಇವತ್ತು ಆ ಬಸ್ಸುಗ ಳಿಗೆ ಪಿನಿಯನ್ ಬೇಕು, ಪಿಸ್ಟನ್‌ಬೇಕು, ರಬ್ಬರ್ ಬುಷ್ ಬೇಕು ಇವುಗಳನ್ನು ಮಾಡುವುದಕ್ಕೆ ಯಾವ ಒಂದು ಸಂಸ್ಥೆಯೂ ಇಲ್ಲ, ಇಂಥಾದ್ದರಲ್ಲಿ ನೀವು ಇನ್ನೂ ಹೆಚ್ಚಿನ ತೆರಿಗೆಯನ್ನು ಹಾಕುವುದಕ್ಕೆ ಹೊರಟರೆ ಈ ಇಂಡಸ್ಟ್ರೀಯೇ ಬಿದ್ದು ಹೋಗತಕ್ಕ ನನ್ನವೇಶ ಬಂದೀತು, ಹಾಗೇನಾದರೂ ಅದದ್ದೇ ಆದರೆ ನಿರುದ್ಯೋಗ ಸಮಸ್ಯೆ ಇನ್ನೂ ಹೆಚ್ಚುತ್ತದೆ, ಆದ್ದರಿಂದ ಒಂದುಕೋಟಿ ರೂಪಾಯಿ ಅಲ್ಲ 50 ಲಕ್ಷ ರೂಪಾಯಿ ಬರುವುದು ಕಡಿಮೆಯಾದರೂ ಚಿಂತೆ ಇಲ್ಲ, ದಯವಿಟ್ಟು ಈ ಮಸೂದೆಯನ್ನು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ರಾರೀ ಮಾಲೀಕರ ಮೇಲೆ, ಬಸ್ ನಡೆಸತಕ್ಕ ವರ ಮೇಲೆ ಇದು ಬಹಳ ಭಾರಿ ದುಷ್ಪರಿಣಾಮವನ್ನುಂಟುಮಾಡುತ್ತದೆ. ಆದ್ದರಿಂದ ಇನ್ನೂ ಸ್ವಲ್ಪ ಕಾದು ನೋಡಿ, ಬೇಕಾದರೆ ಬಡ್ಜೆಟ್ ಅಧಿವೇಶನದಲ್ಲಿ ಇದನ್ನು ಪಾಸ್‌ಮಾಡಿ ಏಪ್ರಿಲ್‌ನಿಂದ ಜಾರಿಗೆ ತರೋಣ, ಈಗ ಬೇಕಾಗಿಲ್ಲ ಎಂದು ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಂಡು ಗೃಹಸಚಿವರು ಸ್ಪೀಕರ್ ಅವರ ಟೀಗೆ ಹೋಗುವುದಕ್ಕೆ ಮುಂಚೆ ಇದನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಮನಸ್ಸು ಮಾಡುತ್ತಾರೆ ಎಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಸ್ವಾಮಿ, ನಾನು ಈ ಬಿಲ್ಲನ್ನು ವಿರೋಧಿಸುತ್ತಾ ಕೆಲವೊಂದು ಮಾತುಗಳನ್ನು ಹೇಳಬಯಸುತ್ತೇನೆ. ಆದರೆ ಈಗತಾನೆ ಮಾನ್ಯ ಮಂತ್ರಿಗಳು ಟೀ ಕುಡಿಯಲಿಕ್ಕೆ ಹೋದರು. ಆದರೆ ಇಲ್ಲಿ ನಡೆಯತಕ್ಕ ವಿಚಾರಗಳನ್ನು ಯಾರು ನೋಟ್ ಮಾಡಿಕೊಳ್ಳುತ್ತಾರೋ ಗೊತ್ತಿಲ್ಲ. ಈಗಿನ ತುರ್ತು ಪರಿಸ್ಥಿತಿಯಲ್ಲಿ ಟ್ರಾನ್ಸ್‌ಪೋರ್ಟೇಷನ್ನಿಗೆ ಬಹಳ ತೊಂದರೆ ಬಂದಿದೆ. ನಮ್ಮ ಷಾಬಾದಿನಲ್ಲಿರುವ ಸಿಮೆಂಟ್ ಫ್ಯಾಕ್ಟರಿಯಿಂದ ಸಿಮೆಂಟನ್ನು ಸಾಗಿಸಲು ವ್ಯಾಗನ್‌ಗಳು ಸಿಕ್ಕದೆ ಸಿಮೆಂಟು ಈ ದಿವಸ ರಾರಿಗಳಲ್ಲಿ ಅವ್ಯಾಹತವಾಗಿ ಈ ಸಾಗಾಣಿಕೆ ನಡೆದುಕೊಂಡು ಬರುತ್ತಿದೆ. ಸಾವಿರಾರು ಮೈಲಿಗಳ ಘಾಸಲೆ ಇರತಕ್ಕ ಸ್ಥಳಗಳಿಗೂ ಕೂಡ ಈ ರಾರಿ ಟ್ರಾನ್ಸ್‌ಪೋರ್ಟ್ ಒಂದು ಸ್ಥಿರತ್ವನ್ನು ನೀಡಿದೆ. ಇಂಥ ಒಂದು ಉದ್ಯಮದ ಮೇಲೆ ಸರ್ಕಾರ ಈಗಾಗಲೇ ಸಾಕಷ್ಟು ಟ್ಯಾಕ್ಸನ್ನು ಹಾಕಿದೆ. 1961ರಲ್ಲೇ ಈ ಕಾನೂನು ಜಾರಿಗೆ ಬಂತು. ಅನಂತರ 1962ರಲ್ಲಿ ಇದನ್ನು ಮತ್ತೆ ಜಾಸ್ತಿಮಾಡಲಾಯಿತು. ಅದಾದಮೇಲೆ ಈಗ ಮತ್ತೆ ಇನ್ನೂ ಒಂದು ವರ್ಷ ಕಳೆದಿಲ್ಲ, ಇನ್ನೊಂದು ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ಈ ತೆರಿಗೆ ಅಮಲುಗಳಿಗೆ ಗೊತ್ತುಗುರಿಗಳೇನೂ ಇದ್ದಹಾಗೆ ಕಾಣುವುದಿಲ್ಲ. ಈಗಿರತಕ್ಕ ಈ ನಮ್ಮ ರೈಲ್ವೆ ವ್ಯವಸ್ಥೆಯೆಲ್ಲಾ ಕೇವಲ ಆ ಒಂದು ನಮ್ಮ ಪ್ಲಾನುಗಳಿಗಾಗಿ ಮಾತ್ರ. ನಮ್ಮ ಪ್ಲಾನುಗಳಿನ್ನೂ ಪೂರ್ತಿಯಾಗಿಲ್ಲ. ಆದರೂ ನಮಗೆ ಅಗತ್ಯವಾದ ಸಿಮೆಂಟು, ಕಬ್ಬಿಣ ಇವುಗಳು ಸರಾಗವಾಗಿ ಸಿಗುತ್ತಿಲ್ಲ. ಅವು ಒಂದುವೇಳೆ ಸಿಕ್ಕಿದರೂ ಅವುಗಳನ್ನು ಸಾಗಿಸಲು ವ್ಯಾಗನ್‌ಗಳಿಗೆ ಪರ್ಮಿಟ್ ಸಿಗುವುದಿಲ್ಲ. ಇದರಿಂದಾಗಿ ನಮ್ಮ ಆಹಾರ ಧಾನ್ಯಗಳ ಧಾರಣೆ ದಿನದಿನಕ್ಕೂ ಏರುತ್ತಿವೆ. ಈ ದಿವಸ ಈ ಒಂದು ಉದ್ಯಮದ ಮೇಲೆ ಈ ರೀತಿ ತೆರಿಗೆಯನ್ನು ಜಾಸ್ತಿಹಾಕಿ ಇದು ಹಾಳಾದರೆ ನಾಳೆ ಅಲ್ಲಿರತಕ್ಕ ಸಾವಿರಾರು ಜನಗಳಿಗೆ ಊಟ ಸಿಕ್ಕುವುದಿಲ್ಲ ಹಾಗೆ ಅವರು ನಿರುದ್ಯೋಗಿಗಳಾಗುವುದೊಂದೇ ಅಲ್ಲದೆ ಸಾಮಾನುಗಳ ಬೆಲೆ ಸಹ ಜಾಸ್ತಿ ಆಗಿ ಜನರಿಗೆ ನಾನಾ ರೀತಿಯಲ್ಲಿ ತೊಂದರೆಗಳುಂಟಾಗುತ್ತವೆ. ಈಗಲೇ ಅಕ್ಕಿ, ರಾಗಿ, ಜೋಳ, ಸಕ್ಕರೆ ಇತ್ಯಾದಿಗಳ ಬೆಲೆ ಬಹಳವಾಗಿ ಏರಿರುತ್ತದೆ. ನಾಳೆ ಈರಾರಿ ವ್ಯವಹಾರ ನಿಂತು ಹೋದರೆ ಆಗ ಆಹಾರ ಧಾನ್ಯಗಳನ್ನು ರೈಲ್ವೆಯ ಮೂಲಕವೇ ಸಾಗಿಸಬೇಕಾಗುತ್ತದೆ. ಆಗ ರೈಲ್ವೆಯಲ್ಲಿ ನಡಯತಕ್ಕ ಅಶ್ರದ್ಧೆಯಿಂದ ಧಾನ್ಯಗಳು ಸಾಯುತ್ತಿರದೆ, ಅವು ಕಿತ್ತು ಹೋಗಿ ಧಾನ್ಯ ಸಾಗಾಣಿಕೆಯಲ್ಲಿ ತುಂಬ ಲುಕ್ಸಾನಾಗುತ್ತದೆ. ಆಗ ಈ ಆಹಾರವಸ್ತುಗಳ ಬೆಲೆಯು ಏರಲೇಬೇಕಾಗುವುದು. ಆದಕಾರಣ ಈ ತೊಂದರೆಯನ್ನು ತಪ್ಪಿಸಿಕೊಳ್ಳಲು ನಾವು ಈ ತೆರಿಗೆಯನ್ನು ಹೆಚ್ಚಿಸಬಾರದು. ನೆನ್ನೆ ಮೊನ್ನೆ ಇಲ್ಲಿರತಕ್ಕ ಎನ್.ಜಿ.ಓ.ಗಳು ಇಲ್ಲಿ ಒಂದು ಸಮ್ಮೇಳನ ಮಾಡಿ ಅದಕ್ಕೆ ಮುಖ್ಯಮಂತ್ರಿಗಳನ್ನೂ ಹಣಕಾಸಿನ ಮಂತ್ರಿಗಳನ್ನೂ ಇನ್‌ವೈಟ್ ಮಾಡಿ ಧಾರಣೆವಾಸಿಗಳು ವಿಪರೀತ ಜಾಸ್ತಿಯಾಗಿವೆ. ತುಟ್ಟಿಭತ್ಯವನ್ನು ಜಾಸ್ತಿಮಾಡಬೇಕೆಂದು ಕೇಳಿಕೊಂಡಿದ್ದಾರೆ. ಈ ದಿವಸ ಈ ಸರ್ಕಾರ ಜರೂರಿಲ್ಲದ ಅನೇಕ ಕೆಲಸವನ್ನು ಕೈಗೊಂಡು ಹಣದ ಪೇಚಿನಲ್ಲಿ ಸಿಕ್ಕಿಕೊಂಡಿದೆ. ಈ ಮಸೂದೆಯಲ್ಲಿ ಕೇಳಿರತಕ್ಕ 16 ಲಕ್ಷ ರೂಪಾಯಿಗಳ ಜರೂರತ್ತೇನೂ ಇದ್ದಂತೆ ಕಾಣುತ್ತಿಲ್ಲ. ಏಕೆಂದರೆ ನಾವು ಸರ್ಕಾರಕ್ಕೆ ಇಂತಿಷ್ಟು ಶರಾವತೀ ದುರ್ವ್ಯವಹಾರ ನಡೆದಿದೆ ಎಂದರೆ, ಅಲ್ಲಿ 4 ಕೋಟಿ ರೂಪಾಯಿಗಳ ದುರ್ವ್ಯವಹಾರ ಆಗಿರಬಹುದು, 2 ಕೋಟಿ ರೂಪಾಯಿ ರಸ್ತೆಬಾಬಿನಲ್ಲಿ ಲುಕ್ಸಾನಾಗಿರಬಹುದು, ಇನ್ನೊಂದರಲ್ಲಿ 4 ಲಕ್ಷ ಲುಕ್ಸಾನಾಗಿರಬಹುದು ಎಂದು ನಮಗೆ ಉತ್ತರಗಳನ್ನು ಹೇಳುತ್ತಿದ್ದಾರೆ. ನಾಳೆ ಇನ್ನೂ ಮಂತ್ರಿಗಳ ಸಂಬಳಗಳನ್ನು ಜಾಸ್ತಿಮಾಡಬೇಕೆಂಬ ಒಂದು ಬಿಲ್ಲನ್ನು ತರುತ್ತಾರೆಂದು ಕೆಲವರು ಹೇಳುತ್ತಿದ್ದಾರೆ. ಇನ್ನೂ ನಮ್ಮ ಪ್ಲಾನುಗಳಿಗೆ ವಿಶೇಷವಾಗಿ ದುಡ್ಡು ಬೇಕಾಗಿದೆ. ಹೀಗಿರುವಾಗ ಇವರು ಮಾತೆತ್ತಿದರೆ ಸತ್ಯಮೇವ ಜಯತೆ ಎಂದು ಏನುಹೇಳುತ್ತಾ ಇದ್ದಾರೋ ಆ ಮಾರ್ಗದಲ್ಲಿ ಯಾವ ಸತ್ಯ, ಧರ್ಮ, ನೀತಿ, ಅಹಿಂಸೆ ಇವೊಂದೂ ಇಲ್ಲ. ಅವರು ಹೇಳುತ್ತಿರುವುದರಲ್ಲಿ ಹುರುಳೂ ಕೂಡ ಇಲ್ಲ. ಪ್ರೊಹಿಬಿಷನ್ನನ್ನು ಸ್ಕ್ರಾಪ್‌ಮಾಡಿ ಎಂದರೆ ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಕಳ್ಳಭಟ್ಟಿ ತಯಾರಿಯು ಕಾಲೇಜ್ ಇಂಡಸ್ಟ್ರಿ ಹಾಗೆ ನಡೆಯುತ್ತಿದೆ. ಇದರಿಂದ ಬರುತ್ತಿದ್ದ ಕೋಟ್ಯಾಂತರ ರೂಪಾಯಿಗಳ ಪರಮಾನ ಬಿದ್ದು ಹೋಗಿದೆ. ನಮ್ಮ ಪ್ಲಾನುಗಳಿಗೆ ಹಣವಿಲ್ಲ ಎಂದು ಹೇಳುತ್ತಿದ್ದಾರೆ. ನಮ್ಮ ಪ್ಲಾನಿಗೆ ದುಡ್ಡಿಲ್ಲದೆ ಕೈಬಿಟ್ಟರೂ ಪ್ರೊಹಿಬಿಷನ್ನನ್ನು ಕೈ ಬಿಡುವುದಿಲ್ಲವೆಂದು ಹೇಳುತ್ತಿದ್ದಾರೆ.

ಅಭಿಮಾನ ಇರುವುದು ಬೇಡ ಎಂದು ಹೇಳುವುದಿಲ್ಲ. ಆದರೆ ಇಂಥ ದುರಭಿಮಾನ ಇರುವುದು ಮಾತ್ರ ಬೇಡ ಎಂದು ಹೇಳುತ್ತೇನೆ. ಖಾದಿ ಬಚ್ಚೆ ಹಾಕಿರುತ್ತಾರೆ, ಜೊತೆಗೆ ಬಾಯಲ್ಲಿ ಸಾವಿರ ವೇದಾಂತ ಹೇಳುತ್ತಾರೆ ಅಂಥವರೇ ಶರಾಬನ್ನು ಮಾರಾಟಮಾಡುತ್ತಿದ್ದಾರೆ, ಜೊತೆಗೆ ಕುಡಿಯುತ್ತಲೂ ಇದ್ದಾರೆ. ಕಾಂಗ್ರೆಸ್ಸಿನಲ್ಲಿರತಕ್ಕ ದೊಡ್ಡದೊಡ್ಡ ವ್ಯಕ್ತಿಗಳೆಲ್ಲ ಕುಡಿಯುತ್ತಾರೆ ಎಂಬುದಾಗಿ ಶ್ರೀ ಸುಬ್ರಹ್ಮಣ್ಯರವರೇ ಹೇಳಿದ್ದಾರೆ. ಕಾಂಗ್ರೆಸ್ಸಿನವರು ಅಲ್ಲಲ್ಲೇ ಆಡಿರತಕ್ಕ ಒಂದೊಂದು ಮಾತುಗಳೇನಿವೆ ಅವುಗಳನ್ನು ಆಡಿದ ಕೂಡಲೆ ಮರೆತುಬಿಡುತ್ತಾರೆ. ಇನ್ನೂ ಮೊನ್ನೆತಾನೆ ಹೊಸದುರ್ಗ, ಬಿಜಾಪುರ ಮತ್ತು ಧಾರವಾಡದ ಚುನಾವಣಾ ಭಾಷಣಗಳಲ್ಲಿ ನಾವು ಇನ್ನು 2 ವರ್ಷಗಳ ಕಾಲ ಯಾವ ಟ್ಯಾಕ್ಸನ್ನೂ ಹಾಕುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಆಲ್ಲ ಆ ಚುನಾವಣೆ ಇನ್ನೂ ಮುಗಿದಿಲ್ಲ ಆಗಲೇ ಈ ತೆರಿಗೆ ಮನೂದೆಯನ್ನು ಇಲ್ಲಿ ತಂದಿದ್ದಾರೆ. ಅಲ್ಲಾ ಹಾಗೆ ಹೇಳಿ ಇಲ್ಲಿ ಇವರು ಈ ರೀತಿ ಟ್ಯಾಕ್ಸ್ ಹಾಕುತ್ತಾ ಹೋದರೆ ಇವತ ಹಣೆಬರಹ ಏನಾಗುತ್ತದೆ! ಆದುದರಿಂದ ಇದನ್ನು ವಾಪಸ್ಸು ತೆಗೆದಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ನಂಜೀವನಾಥ ಏಕಳ (ಸುರತ್ಕಲ್).—ಮಾನ್ಯ ಸಭಾಪತಿಗಳೇ, ಈ ತಿದ್ದುಪಡಿ ಮನೂದೆಯನ್ನು ನಾನು ವಿರೋಧಿಸುತ್ತಾ, ನಮ್ಮ ಸಾಗಾಣಿಕೆಗೆ ಇರತಕ್ಕ ತೊಂದರೆಯೇನು ಎಂಬುದನ್ನು ವಿವರಿಸುತ್ತೇನೆ. ಈಗಾಗಲೇ ರಾರಿ ಟ್ರಾಫಿಕ್ ಉದ್ಯಮವು ನಮ್ಮಲ್ಲಿ ಬಹಳ ದೊಡ್ಡದಾಗಿ ಬೆಳೆದು ಬಂದಿದೆ. ರೈಲ್ವೆಯಲ್ಲಿ ಸಾಮಾನುಗಳ ಸಾಗಾಣಿಕೆಗೆ ವ್ಯಾಗನ್‌ಗಳು ಸಿಕ್ಕದೆ ಇರುವುದರಿಂದ ಈ ರಾರೀ ಸಾಗಾಣಿಕೆ ದೇಶಾದ್ಯಂತವೂ ಅವ್ಯಾಹತವಾಗಿ ನಡೆದು ಕೊಂಡು ಬರುತ್ತಿದೆ. ಇದನ್ನು ದೊಡ್ಡ ದೊಡ್ಡ ನಗರಗಳಲ್ಲಿ 'ನೋಡಬಹುದಾಗಿದೆ. ಒಂದೊಂದು ಕಂಪನಿಯಲ್ಲೂ ನೂರಾರು ರಾರಿಗಳಿರುತ್ತವೆ. ಲಕ್ಷಾಂತರ ರೂಪಾಯಿಗಳ ಸಾಮಾನುಗಳನ್ನು ಇವುಗಳ ಮೂಲಕ ಸಾಗಿಸರಾಗುತ್ತಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಪಾಯಿಂಟ್ ಆಫ್ ಆರ್ಡರ್, ಸಾರ್. ಸಭೆಯಲ್ಲಿ ಗೊರಕೆ ಶಬ್ದ ಕೇಳಿಬರುತ್ತಿದೆ.

ಶ್ರೀ ನಂಜೀವನಾಥ ಏಕಳ.—ಈಗ ರಾರಿಗಳು ಒಂದು ರೂಪಾಯಿಗೆ 5 ನ.ಪೈ. ತೆರಿಗೆ ಕೊಡಬೇಕೆಂದರೂ ಒಂದೊಂದು ರಾರಿಗೆ 40-50 ರೂಪಾಯಿ ಟ್ಯಾಕ್ಸ್‌ನ್ನು ಕೊಡಬೇಕಾಗುತ್ತದೆ. ಇದರಿಂದ ಸಾಮಾನ್ಯವಾಗಿ ಇವುಗಳ ಆರ್ಥಿಕ ಸ್ಥಿತಿಗೆ ಅಡಚಣೆ ಉಂಟಾಗುತ್ತದೆ. ಮುಂದೆ ಈ ಉದ್ಯಮ ಮುರಿದು ಬೀಳಬಹುದು. ಇಲ್ಲವೇ ಟ್ಯಾಕ್ಸೇಷನ್ ಬರ್ಡನ್ ಜಾಸ್ತಿಯಾಗಿ (ತೆರಿಗೆ ಭಾರ) ಧಾನ್ಯಗಳ ಧಾರಣೆ ಜಾಸ್ತಿ ಆಗಬಹುದು. ಇದನ್ನು ತಪ್ಪಿಸಿಕೊಳ್ಳಲು ಅವರು ರಾರಿಗಳನ್ನು ಹುಡುಕಿಯೇ ಹುಡುಕುತ್ತಾರೆ. ಆಗ ನಮಗೆ ನ್ಯಾಯವಾಗಿ ಇದರಿಂದ ಎಷ್ಟು ಟ್ಯಾಕ್ಸ್ ಬರಬೇಕೋ ಅಷ್ಟು ಟ್ಯಾಕ್ಸ್ ಬಾರದೆ ಹೋಗಬಹುದು. ಮುಂದೆ ಸರ್ಕಾರಕ್ಕೆ ಇದರಿಂದ ನಷ್ಟವಾಗಬಹುದು. ಈ ಒಂದು ಸಂಶಯ ಕೂಡ ನನಗೆ ಇದೆ. ಅಲ್ಲದೆ ಸಾಮಾನು ಸಾಗಾಣಿಕೆ ಮಾಡುವವರು ಹೇಗೆ ಬೇರೆ ರಾರಿ ಹುಡುಕುತ್ತಿದ್ದಾರೆಂದರೆ ಉದಾಹರಣೆಯಾಗಿ ನಮ್ಮ ಮಂಗಳೂರಿಗೆ ಬೊಂಬಾಯಿ ಮತ್ತಿತರ ಭಾಗಗಳಿಂದ ರಾರಿಗಳ ಮೂಲಕ ಹೆಚ್ಚು ಹೆಚ್ಚಾಗಿ ಸಾಮಾನುಗಳು ಬರುತ್ತಿರುತ್ತವೆ. ಈ ರೀತಿಯಾಗಿ ಸಾಮಾನುಗಳನ್ನು ತರುವ ರಾರಿಗಳ ಮೇಲೆ ಹೆಚ್ಚಿನ ತೆರಿಗೆ ಹೇರುವಂತೆ ಮಾಡಿದರೆ ಸ್ವಾಭಾವಿಕವಾಗಿ ಇದರ ಮೂಲಕ ಸಾಮಾನುಗಳನ್ನು ತರುವುದಕ್ಕೆ ಬದಲಾಗಿ ಸಮುದ್ರದ ಮೇಲೆ ಬರುವ ಕಪ್ಪಲುಗಳ ಮೂಲಕ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆಗ ಸರಕಾರ ಇದರಿಂದ ಎಷ್ಟು ಆದಾಯ ಬರುತ್ತದೆ ಎಂದು ನಿರೀಕ್ಷಿಸಿರುತ್ತಾರೋ ಅಷ್ಟೂ ಬರುವುದಿಲ್ಲ. ಹೀಗೆ ಮಾಡುವವರಿಂದ ದೊಡ್ಡ ಆದಾಯ ಬರುತ್ತಿದೆ ಎಂದು ಮತ್ತು ನಮ್ಮ ಪಂಚವಾರ್ಷಿಕ ಯೋಜನೆಗಾಗಿ ಹಣ ಕೂಡಿಸ ಬೇಕೆಂದು ಇಂತಹ ಹೊಸ ತೆರಿಗೆಯನ್ನು ಹಾಕುವುದು ಸರಿಯಲ್ಲ. ಎಲ್ಲೆಲ್ಲಿ ಅನಾವಶ್ಯಕವಾಗಿ ಖರ್ಚಾಗುತ್ತಿದೆ ಎಲ್ಲ ಹಣ ಪೋಲಾಗುತ್ತಿದೆ ಅವನ್ನು ಸರಕಾರ ಮೊದಲು ನೋಡುವುದು ಅದರ ಕರ್ತವ್ಯ. ಇದಕ್ಕಾಗಿ ತಕ್ಕ ಉಪಾಯಗಳನ್ನ ಕಂಡುಹಿಡಿಯಬೇಕು. ಇಂತಹ ಎಷ್ಟೋ ಪ್ರಶ್ನೆಗಳಿರುವಾಗ ನಮ್ಮನೆ ನಮ್ಮಲ್ಲಿ ಅಧಿಕಾರ ಇದೆ ಎನ್ನುವ ದರ್ಪದ ಬಲದಿಂದ ಹೊಸ ತೆರಿಗೆಗಳನ್ನು ಹೇರುವುದು ಸರಿಯಲ್ಲ ಮತ್ತು ಇದು ಅರ್ಥ ಶಾಸ್ತ್ರಜ್ಞರ ಲಕ್ಷಣವೂ ಅಲ್ಲ. ಮುಖ್ಯ ಉದ್ದೇಶ.—

"The possibility of payment of these taxes without any difficulty to the tax-payers ಎಂದು.

ಇದೂ ಅಲ್ಲದೆ ಯಾವ ತೆರಿಗೆ ಹಾಕಬೇಕೆಂದು ಸರಕಾರ ಅಪೇಕ್ಷಿಸುವುದೋ ಅದಕ್ಕೆ ತಕ್ಕಂತೆ ಜನಕ್ಕೆ ಅನುಕೂಲಗಳನ್ನೂ ಒದಗಿಸಿಕೊಡಲು ಯೋಚನೆ ಮಾಡಬೇಕು. ಆದರೆ ಈ ಅಡಳಿತ ಪಕ್ಷದವರು ತೆರಿಗೆಗಳನ್ನು ಜನರ ಮೇಲೆ ಹೊರಸುತ್ತಾರೆಯೇ ಹೊರತು ನಿಜವಾಗಿಯೂ ಅವರಿಗೇನೂ ಅನುಕೂಲಗಳನ್ನು ಮಾಡಿಕೊಡುತ್ತಿಲ್ಲ. ಅಲ್ಲದೆ ರಾರಿ ಟ್ರಾನ್ಸ್‌ಪೋರ್ಟ್ ಮಾಡುವವರಿಗೆ, ನಮ್ಮ ಸರಕಾರ ಸಹಾಯ ಏನು ಎಂದರೆ ಲೈಸೆನ್ಸ್ ಕೊಡುವುದು, ಡ್ಯೂಟಿಗಳನ್ನು ಹೇರುವದು, ಸರ್‌ಚಾರ್ಜ್ ಎಂದು

(ಶ್ರೀ ಸಂಜೀವನಾಥ ಐಕಳ)

ಬೇರೆ ಹಾಕುವುದು ಹೇಗೆ ಬೇರೆ ಬೇರೆ ವಿಧದಲ್ಲಿ ಲಾರಿ ಮಾಲೀಕರುಗಳ ಮೂಲಕ ಸಾಗಾಣಿಕೆ ಮಾಡುವವರ ಮೇಲೆ ತೆರಿಗೆಯ ಹೊರೆಯನ್ನು ಹೊರಸುತ್ತಿರುವುದು ಈ ತರಹದ ಭಾವನೆ ಸರಿಯಿಲ್ಲ ಎಂದು ಆಡಳಿತ ಪಕ್ಷದವರು ಕೂಡ ಒಪ್ಪುತ್ತಾರೆಂದು ನನಗೆ ನಂಬಿಕೆ ಇದೆ. ಬೇಕಾದರೆ ಇದನ್ನು ವೋಟಿಗೆ ಹಾಕಿದರೆ ಆಗ ಇದರ ಬಗೆಗೆ ವಿರೋಧ ಮಾಡಲು ನಮ್ಮೊಂದಿಗೆ ಸೇರುತ್ತಾರೆಂದು ಭಾವಿಸುತ್ತೇನೆ. ನಾನು ಈ ಬಿಲ್ಲನ್ನು ವಿರೋಧಿಸುತ್ತೇನೆ.

†ಶ್ರೀ ಗೋಪಾಲ ಸಾರೆನ್ನ (ಮೂಡಬಿದ್ರಿ).—ಸ್ವಾಮೀ, ಈ ಮಸೂದೆಯನ್ನು ತಂದು ಹೊಸ ತೆರಿಗೆಯನ್ನು ಹಾಕುವಾಗ, ಇನ್ನಷ್ಟು ತೆರಿಗೆಯ ಹೊರೆಯನ್ನು ಜನರಮೇಲೆ ಹೊರಿಸಬೇಕೆಂದು ತರುತ್ತಿದ್ದೀರೇನು ? ಅಲ್ಲದೆ ನಮ್ಮ ಜನರಲ್ಲ ಇನ್ನೂ ಯಾವ ಯಾವ ತೆರಿಗೆಯನ್ನು ತರುತ್ತಾರೋ ಎನ್ನುವ ಒಂದು ಭಯ, ಹೆದರಿಕೆ, ಹೆಚ್ಚುತ್ತಾ ಬರುತ್ತಿದೆ. ಪ್ರತಿಯೊಂದು ಕಡೆಯಲ್ಲೂ ಜನಸಾಮಾನ್ಯರ ಮೇಲೆ ಹೊರೆ ಹೆಚ್ಚಾಗುತ್ತಿದೆ ಎನ್ನುವುದನ್ನು ಆಡಳಿತ ನಡೆಸುವ ಸರಕಾರ ಗಮನಿಸಿದಂತಿಲ್ಲ. ಇಷ್ಟು ಮಾತ್ರವಲ್ಲ. ಗೋವಾದಲ್ಲಿ ಈಚೆಗೆ ಆದ ಚುನಾವಣೆ ಇದರ ಸತ್ಯಾಂಶವನ್ನು ಪ್ರದರ್ಶಿಸಿದೆ. ಆದೂ ಎಷ್ಟುಮಟ್ಟಿಗೆ ಎಂದರೆ ಹಿಂದೂಸ್ಥಾನದಲ್ಲೆಲ್ಲಾ ಈಗ ಆಡಳಿತ ನಡೆಸುತ್ತಿರುವ ಸರಕಾರ ಬೇಡ ಎನ್ನುವುದನ್ನು ತೋರಿಸಿದೆ. ಅದರಲ್ಲೂ ಕಾಂಗ್ರೆಸ್ಸು ಪಕ್ಷದ ಉಮೇದುವಾರರುಗಳು ಡಿಪಾಸಿಟ್ಟುಗಳನ್ನು ಕಳೆದುಕೊಳ್ಳುವಷ್ಟರಮಟ್ಟಿಗೆ ಜನ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಹದಿನೆಂಟು ಜನರಲ್ಲ ಚುನಾವಣೆ ನಡೆಸಿ ಆಡಳಿತಪಕ್ಷಕ್ಕೆ ಕಣ್ಣು ತೆರೆಯುವಂತೆ ಮಾಡಿರುವುದು ತುಂಬಾ ಶೋಚನೀಯ. ಒಬ್ಬರು ಮಾತ್ರ ಎಲ್ಲೋ ಒಂದು ಒಳದ್ವೀಪದಿಂದ ಆರಿಸಿಬಂದಿದ್ದಾರೆ ಎಂದರೆ ನಿಮ್ಮ ಆಡಳಿತ ಪಕ್ಷವನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡಿದ್ದಾರೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಇದರಿಂದಲೂ ನಮ್ಮ ಸರಕಾರ ಕಣ್ಣುತೆರೆದು ನೋಡುತ್ತಿಲ್ಲ. ನಮ್ಮ ಮುಂದೆ ಈ ಬಿಲ್ಲನ್ನು ತಂದು ಇಂತಹ ಹೊಸ ತೆರಿಗೆಯನ್ನು ಜನರಮೇಲೆ ಹೊರಿಸುವಾಗ ಎಷ್ಟೋ ಜನರು ಪರ್ಮಿಟ್ಟುಗಳನ್ನು ಪಡೆದಿರುವ ಟ್ಯಾಕ್ಸಿಗಳವರು, ಕಾರುಗಳನ್ನು ಓಡಿಸುವ ಖಾಸಗೀ ಮಾಲೀಕರು ಕಾಂಪಿಟಿಷನ್ನು ಮಾಡುತ್ತ ಓಡಿಸುತ್ತಿರುವುದನ್ನು ನಿಮ್ಮ ಸರಕಾರದ ಆಡಳಿತ ಪಕ್ಷದವರು ವಿಚಾರಿಸಿದ್ದೀರಾ ! ಈ ಕಡೆ ಗಮನ ಕೊಟ್ಟಂತೆ ಕಾಣುತ್ತಿಲ್ಲ. ಪ್ರತಿಯೊಬ್ಬರೂ ಪ್ರೈವೇಟಾಗಿ ಕಾರ್ ಗಳನ್ನು ಪಡೆದು ಟ್ಯಾಕ್ಸಿಯಂತೆ ಜನರನ್ನು ಕೂರಿಸಿಕೊಂಡು ಫಾಯದೆಯಾಗಿ ಸಂಪಾದನೆ ಮಾಡುತ್ತಿದ್ದಾರೆ. ಟ್ಯಾಕ್ಸಿಗಳಿಗಿಂತ ಪ್ರೈವೇಟು ಜನರು ಹೆಚ್ಚಿಗೆ ಟ್ಯಾಕ್ಸನ್ನೂ ಕೊಡದೆ ಕಾರುಗಳನ್ನು ಓಡಿಸುತ್ತಿರುವುದರಿಂದ ಅದರಲ್ಲಿ ಹೆಚ್ಚಿನ ಸೌಕರ್ಯಗಳು ಸಿಗುತ್ತೆ. ಅಲ್ಲ ಜನರು ಓಡಾಡುವ ಸಂಖ್ಯೆ ಜಾಸ್ತಿಯಾಗಿದೆ. ಅದರಿಂದ ಸರಕಾರಕ್ಕಾಗುವ ಉತ್ಪತ್ತಿಯೂ ಕಡಿಮೆಯಾಗುತ್ತ ಬರುತ್ತಿದೆ. ಈಗ ಹೊಸ ತೆರಿಗೆ ಕೊಡಬೇಕೆಂದು ಈ ಜಾತಿಯ ತೆರಿಗೆಯನ್ನು ತರುವ ಸಮಯದಲ್ಲಿ ಆರ್. ಟಿ. ಓ. ಆಫೀಸಿನ ವಿಷಯಗಳ ವಿಚಾರಗಳಲ್ಲಿ ನನ್ನಮಿತ್ರರೆಲ್ಲರೂ ಆಗಲೇ ಹೇಳಿದರು. ಅಲ್ಲಿನ ಆಫೀಸಿನಲ್ಲಿರುವ ಮಾಮೂಲು ಮತ್ತು ಅದಕ್ಕಾಗಿರುವ ಪ್ರತ್ಯೇಕ ಏಜೆಂಟರುಗಳೂ ಇದ್ದಾರೆ. ಅಲ್ಲ ಅವರಿಗೆ ಸಿಗುವ ಮಾಮೂಲು ಎಂದರೆ ಸರಕಾರಕ್ಕೆ ಬರುವ ಆದಾಯಕ್ಕಿಂತಲೂ ಹೆಚ್ಚಾಗಿ ಸಿಗುತ್ತಿದೆ. ಹೀಗೆ ಇಲ್ಲಿ ಒಳಗಿಂದೊಳಗೇ ಆಗುತ್ತಿರುವ ವ್ಯವಹಾರಗಳನ್ನು ಸರಕಾರ ಗಮನಿಸಿಲ್ಲ ಎಂದು ತೋರುತ್ತೆ. ಇದರ ಜೊತೆಗೆ ಈ ರೀತಿ ತೆರಿಗೆಗಳನ್ನು ಹೇರುತ್ತಿರುವ ಜನಕ್ಕೆ Amenities ಎಂದರೆ ಸವಲತ್ತುಗಳನ್ನು ಕೊಡುವುದರ ಕಡೆಗೆ ಸರಕಾರ ಗಮನ ಕೊಡುತ್ತಿಲ್ಲ. ಇದಕ್ಕಾಗಿ ಎಷ್ಟೋ ಅವಗಡಗಳು ಮತ್ತು ಇದರಿಂದ ಜನಕ್ಕೆ ಆಗುತ್ತಿರುವ ತೊಂದರೆಗಳು ಅಪಾಯದ ಕಡೆಗೆ ಸರಕಾರ ಗಮನ ಕೊಟ್ಟಂತೆ ಕಾಣುವುದಿಲ್ಲ. ಎಲ್ಲೆಲ್ಲ ತೆರಿಗೆ ಹೊರೆಯುತ್ತಿದ್ದಾರೋ ಹಾಗೆ ಅಲ್ಲೆಲ್ಲಾ ಸವಲತ್ತುಗಳನ್ನೂ ಜನಕ್ಕೆ ಕೊಡಬೇಕು. ಹಾಗೆ ಮಾಡದೆ ಇಲ್ಲಿ ಈ ಬಿಲ್ಲನ್ನು ತಂದು ಜನರಮೇಲೆ ಹೇರುತ್ತಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ ನಾವು ಅಧಿಕಾರದಲ್ಲಿದ್ದೇವೆ, ನಮ್ಮನ್ನು ಅಧಿಕಾರದಿಂದ ಕೆಳಕ್ಕೆ ಇಳಿಸಲು ಸಾಧ್ಯವಿಲ್ಲ ಎಂದು ನೀವು ತಿಳಿದಿರಬಹುದು. ಮತ್ತು ನಮ್ಮ ದೇಶದ ಜನತೆಗಾಗಿ ಅನುಕೂಲ ಮಾಡುತ್ತೇವೆಂದು ನಿಮ್ಮೊಳಗೆ ಭೇದಭಾವಗಳನ್ನಿಟ್ಟುಕೊಂಡು ಒಳಜಗಳಗಳನ್ನು ಮಾಡಿಕೊಂಡು ನಮ್ಮ ಸರಕಾರವೇ ಸ್ಥಿರ ಎಂದು ಒಂದು ತರಹದ ಅಭಿಮಾನ ಇರಬಹುದು. ಇದು ತಪ್ಪು. ಹೀಗೆ ಹೊಸ ಹೊಸ ತೆರಿಗೆಗಳನ್ನು ಹಾಕುವಂತಹ ಬಿಲ್ಲನ್ನು ತರುವುದನ್ನು ಇನ್ನು ಮುಂದಾದರೂ ಕಡಿಮೆ ಮಾಡಬೇಕು. ಒಂದುಕಡೆ ಚುನಾವಣಾ ಭಾಷಣದಲ್ಲಿ ಅಥವಾ ಸಾರ್ವಜನಿಕ ಭಾಷಣಗಳಲ್ಲಿ ಹೊಸ ತೆರಿಗೆಗಳನ್ನು ಹಾಕುವುದಿಲ್ಲ ಎಂದು ಹೇಳುತ್ತೀರಿ. ಆದರೆ ಇಲ್ಲಿ ಒಂದು ಹೊಸ ತೆರಿಗೆಯ ಬಿಲ್ಲನ್ನು ತಂದು ಹೇರಿ ಜನತೆಗೆ ಮೋಸ ಮಾಡಲು ಹಾಗೂ ವಂಚನೆ ಮಾಡಲು ಏಕೆ ಹೋಗುತ್ತೀರಿ ! ಇದರಿಂದ ಜನಕ್ಕೆ ಸಿಗುವ ಅನುಕೂಲಗಳೂ ಕಡಿಮೆ. ಇಂತಹ ಬಿಲ್ಲನ್ನು ಸ್ವಲ್ಪ ಸ್ವಲ್ಪವಾಗಿ ಜನಕ್ಕೆ ಅನುಕೂಲ ಸಿಗುವಂತೆ ಮಾಡಬೇಕು ಎಂದು ಇಷ್ಟು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

3-30 P.M.

